# ವೈದ್ಯರನ್ನು ಹೀಗಳೆಯುವ ಮುನ್ನ...

ವೈದ್ಯರನ್ನು ಬೈಯುವುದು ಸುಲಭ. ಆದರೆ ನಿಜಕ್ಕೂ ವೈದ್ಯರು ನೀವು ಅಂದುಕೊಂಡಂತೆ ಕಟುಕರೇ? ಅವರೂ ನಿಮ್ಮ ಸಮಾಜದ ಒಳಗಿನಿಂದಲೇ ಹುಟ್ಟಿ ಬಂದವರಲ್ಲವೇ?

■ ಡಾ. ಅರುಣಾ ಯಡಿಯಾಳ್



ವೈದ್ಯರನ್ನು ದೇವರಿಗೆ ಹೋಲಿಸಿ ನೋಡುತ್ತಿದ್ದ ಕಾಲವೊಂದಿತ್ತು! ಬಹುಶಃ ಆ ಕಾಲದಲ್ಲೇ ಈ ರೀತಿಯ ಹೊಗಳಿಕೆಗಳು ನಮ್ಮಂಥ ಹದಿಹರೆಯದವರ ತಲೆಗಳೊಳಗೆ ನುಸುಳಿ ಡಾಕ್ಟರ್ ಆಗಬೇಕು ಎಂಬ ಆಕಾಂಕ್ಷೆಯನ್ನು ಹುಟ್ಟು ಹಾಕಿದ್ದು. ನಾವು ಅಂದರೆ, ನನ್ನಂತೆಯೇ ಇದ್ದ ಸಹಸ್ರಾರು ಕನಸುಗಣ್ಣಿನ ವಿದ್ಯಾರ್ಥಿನಿಯರು! ಸಹನೆ, ಕೌಶಲದಿಂದ ವೈದ್ಯ ವೃತ್ತಿಯ ಗುರಿ ತಲುಪಿದವರು. ಆದರೆ, ಈ ಗುರಿ ಮುಟ್ಟುವಷ್ಟರಲ್ಲಿ ಅದರ ಸ್ವರೂಪವೇ ಬದಲಾಗಿರುತ್ತದೆ ಎಂದು ಊಹಿಸಿರಲಿಲ್ಲವಷ್ಟೇ?

ಮುಟ್ಟಿದ ಗುರಿಯ ನಂತರವೂ ಸಮಾಜದ ನಿಂದನೆ, ಅಪನಂಬಿಕೆಗಳ ಕಲ್ಲು ಮುಳ್ಳುಗಳೇ ಎದುರಾದಾಗ ನಿರಾಸೆ, ಹತಾಶೆಗೆ ಜಾರಿದ ವೈದ್ಯ ಮನಸ್ಸುಗಳೆಷ್ಟೋ! ಇನ್ನು ಇಂಥ ದುಗುಡ, ದೂರು ತುಂಬಿದ ಮನಸ್ಸುಗಳಿಂದಲೇ ಸಮಾಜದ ಬಗ್ಗೆ, ಅನಾರೋಗ್ಯದ ಬಗ್ಗೆ, ಕರುಣೆ, ಕಾಳಜಿ ಉಕ್ಕಿ ಹರಿಯಬೇಕೆಂಬ ನಿರೀಕ್ಷೆ ಇಟ್ಟುಕೊಂಡರೆ.. ಅದು ಸುಳ್ಳಾಗದೇ ಇದ್ದೀತೇ?

ಹೀಗೆ ಈ ಸಮಾಜವು ವೈದ್ಯರನ್ನು ನಿಂದಿಸುತ್ತಾ ಹೋದರೆ.. ಆ ನಿಂದನೆಯಿಂದ ನಲುಗಿ ನೊಂದ ವೈದ್ಯಲೋಕ ಸಮಾಜದಿಂದ ವಿಮುಖವಾದರೆ ಈ ಸಮಾಜದ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಸಾಧ್ಯವೇ? ಈ ಸಮಾಜದ ಒಂದು ಭಾಗವೇ ಆಗಿರುವ, ಅದರೊಳಗೇ ಬಾಳಿ ಬದುಕಬೇಕಾದ ವೈದ್ಯ ವೃಂದವೂ ನೆಮ್ಮದಿಯಾಗಿರಲು ಸಾಧ್ಯವೇ? ಉತ್ತರಗಳಿಗಿಂತ ಪ್ರಶ್ನೆಗಳದೇ ಮೇಲುಗೈಯಾದಾಗ ಗೊಂದಲವೂ ಸಹಜವೇ!

## ಗೊಂದಲದ ಮೂಲವೇನು?

ಮೂಲ ಹುಡುಕಿದಾಗಲೇ ಅದಕ್ಕೆ ಪರಿಹಾರ ಸಿಗಲು ಸಾಧ್ಯ. ಸಮಾಜಕ್ಕೆ ವೈದ್ಯರ ಕುರಿತು ಇರುವ ದೂರು, ಸಂಶಯ, ಅಪನಂಬಿಕೆ, ಅಸಹನೆಯ ಮೂಲ ಅಡಗಿರುವುದು ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ, ಆರ್ಥಿಕ ಸ್ಥಿತಿಯಲ್ಲಿ, ಅರಿವಿನ ಕೊರತೆಯಲ್ಲಿ ಹಾಗೂ ಪೂರ್ವಾಗ್ರಹಪೀಡಿತ ಧೋರಣೆಗಳಲ್ಲಿ! ಇವೆಲ್ಲಾ ಸಾಲದೆಂಬಂತೆ ಈ ರೀತಿಯ ವೈದ್ಯರ ಮೇಲಿನ ಜನತೆಯ ವಿರೋಧಾಭಾಸದ ಉರಿಯನ್ನು ಇನ್ನಷ್ಟು ಜ್ವಲಿಸುವಂತೆ ಮಾಡಿ, ಅದರಲ್ಲಿ ತಮ್ಮ ಪ್ರತಿಷ್ಠೆ ಪ್ರಜ್ವಲಿಸಿಕೊಳ್ಳುತ್ತಿರುವ, ಅವಕಾಶವಾದಿ ರಾಜಕಾರಣಿಗಳು ಬೇರೆ!

ಇತ್ತೀಚೆಗಷ್ಟೇ ಸಚಿವರೊಬ್ಬರು 'ವೈದ್ಯರು ಕ್ಷೌರಿಕರಂತೆ, ಜೇಬುಗಳ್ಳರಂತೆ ಧನದಾಹಿಗಳು' ಎಂಬ ಅಸಂಬದ್ಧ ಹಾಗೂ ಅತಿರೇಕದ ಹೇಳಿಕೆ ಕೊಟ್ಟರು. ನಂತರ ಕ್ಷೌರಿಕ ವೃತ್ತಿಯವರಿಗೆ ಮಾತ್ರ ಕ್ಷಮೆಯನ್ನೂ ಕೇಳಿದರು! ಅವರಿಗೆ ವೈದ್ಯರ ಹತ್ತಿರ ಕ್ಷಮೆ ಕೇಳುವ ಉದ್ದೇಶವೂ ಇರಲಿಲ್ಲ.. ಅದರ ಅವಶ್ಯಕತೆಯೂ ಬರಲಿಲ್ಲ! ಆದರೆ ವೈದ್ಯರು ಅವರ ಪ್ರತಿಕೃತಿ ದಹನ ಮಾಡಲಿಲ್ಲ, ಧಿಕ್ಕಾರ ಕೂಗಲಿಲ್ಲ. ತಮ್ಮ ವೃತ್ತಿಗೆ ನಿಷ್ಠರಾಗಿ, ಆ ದಿನವೂ ಎಂದಿನಂತೆಯೇ ಎಲ್ಲಾ ವೈದ್ಯರೂ ಅವರವರ ರೋಗಿಗಳನ್ನು ನೋಡಿ ಚಿಕಿತ್ಸೆ ನೀಡಿದ್ದಾರೆ. ವೈದ್ಯರ ಸಂಖ್ಯೆಯೂ ಸಚಿವರ 'ವೋಟು– ಬ್ಯಾಂಕ್'ಗೆ ಪೆಟ್ಟು ಬೀಳುವಷ್ಟು ಇಲ್ಲವಲ್ಲ! ಹಾಗಾಗಿ ವೈದ್ಯರನ್ನು ಓಲೈಸುವ ಅಗತ್ಯವೂ ಬೀಳಲಿಲ್ಲ. ಪುಣ್ಯಕ್ಕೆ 'ಜೇಬುಗಳ್ಳರ ಸಂಘ' ಅಂತ ಅಧಿಕೃತವಾಗಿ ಇಲ್ಲ. ಇದ್ದಿದ್ದರೆ ಸಚಿವರು ಅವರ ಬಳಿಯೂ ಕ್ಷಮೆ ಕೇಳುವ ಪರಿಸ್ಥಿತಿ ಬರುತ್ತಿತ್ತೇನೋ?

ವೈದ್ಯ ಸಮುದಾಯವನ್ನು, ಅವರ ವೃತ್ತಿಯನ್ನು ಹೀನಾಯವಾಗಿ ಕಂಡ ರಾಜಕಾರಣಿಗಳಿಗೆ ನಮ್ಮದೂ ಒಂದು ಪ್ರಶ್ನೆಯಿತ್ತು. 'ರಾಜಕಾರಣಿಗಳು ಎಷ್ಟು ಸಾಚಾ?' ಎನ್ನುವುದೇ ಆ ಪ್ರಶ್ನೆ. ಅದು ಬಿಡಿ; ರಾಜಕಾರಣಿಗಳಿಗೆ ಅಜೆಂಡಾ ಇರುತ್ತದೆ. ಅದಕ್ಕೆ ತಕ್ಕಂತೆ ಮಾತನಾಡುತ್ತಾರೆ. ಆದರೆ, ವೈದ್ಯರಿಗೆ ನಿಜವಾಗಲೂ ನೋವಾಗುವುದು, ಪಿಚ್ಚೆನಿಸುವುದು, ಆಘಾತವಾಗೋದು ನಮ್ಮಿಂದ ಚಿಕಿತ್ಸೆ ಪಡೆದ ರೋಗಿಗಳೇ ನಮ್ಮನ್ನು ನಿಂದಿಸಿ, ಸಂಶಯಿಸಿ, ಅವಮಾನಿಸಿದಾಗ! ಏಕೆ ಈ ಸಮಾಜದಲ್ಲಿ ವೈದ್ಯರ ವಿರುದ್ಧ ಪದೇ ಪದೇ ಅಸಮಾಧಾನಗಳು ಸ್ಫೋಟಗೊಳ್ಳುತ್ತವೆ? ಏಕೆ ನಮ್ಮನ್ನು ಇಷ್ಟೊಂದು ಅನುಮಾನದಿಂದ ನೋಡುತ್ತಾರೆ?

## ವಾದ ಮತ್ತು ಪ್ರತಿವಾದ

ವೈದ್ಯ ಸಮುದಾಯದ ವಿರುದ್ಧ ಮಂಡಿಸಲಾಗುತ್ತಿರುವ ಸಾರಾಸಗಟು ಆರೋಪಗಳ ಕಡೆಗೊಮ್ಮೆ ಗಮನ ಹರಿಸೋಣ. ಕೆಲವು ರೋಗಿಗಳ ನಿರ್ದಿಷ್ಟ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿಲ್ಲ. ಅದು ಆಯಾ ಪ್ರಕರಣದ ವಿವರಗಳನ್ನು ಅವಲಂಬಿಸಿರುತ್ತದೆ. ಆದರೆ ಜನರು ಸಾಮಾನ್ಯೀಕರಿಸಿ ಹೇಳುವ ಆರೋಪಗಳ ಬಗ್ಗೆ ಒಂದಿಷ್ಟು ಪ್ರತಿವಾದ ಮಂಡಿಸಬಹುದು. ನನ್ನಂತೆ ಸಾವಿರಾರು ವೈದ್ಯರು ತಮ್ಮ ವೃತ್ತಿಯ ಮೇಲೆ ಅಭಿಮಾನ ಮತ್ತು ನಂಬಿಕೆ ಇಟ್ಟಿರುವುದರಿಂದ ಈ ಪ್ರಶ್ನೋತ್ತರದ ಅಗತ್ಯವೂ ಇದೆ.

### ಆರೋಪ 1: ವೈದ್ಯರು ಧನದಾಹಿಗಳು. ನಮ್ಮ ಜೇಬನ್ನು ಖಾಲಿಯಾಗಿಸುತ್ತಾರೆ. ಸಿಕ್ಕಾಪಟ್ಟೆ ದುಡ್ಡು ಸುಲಿಯುತ್ತಾರೆ.

★ ಅಂದರೆ ವೈದ್ಯರು ಹಣದ ಮೋಹವಿಲ್ಲದೆ ಸೇವೆ ಸಲ್ಲಿಸಬೇಕು ಎನ್ನುವುದು ಜನರ ನಿರೀಕ್ಷೆ. ಒಮ್ಮೆ ಯೋಚಿಸಿ ನೋಡಿ– ವೈದ್ಯರಾದವರು ಕೇವಲ ಐದು ರೂಪಾಯಿಗೆ ಪ್ರತಿಯೊಬ್ಬ ರೋಗಿಯನ್ನೂ ನೋಡಿದರೆ, ಅವರು ಆ ದಿನ ಅವರ ಊಟದ ಖರ್ಚನ್ನಾದರೂ ನಿಭಾಯಿಸಲು ಸಾಧ್ಯವೇ? ಹಾಗೆ ಐದು ರೂಪಾಯಿಗೆ ರೋಗಿಯನ್ನು ನೋಡುವ ವೈದ್ಯರಿಗೆ ಐದು ರೂಪಾಯಿಗೆ ಊಟ ಕೊಡುವವರಿದ್ದಾರೆಯೇ? ಅವರ ಹೆಂಡತಿ ಮಕ್ಕಳಿಗೆ ಬಟ್ಟೆ ಐದು ರೂಪಾಯಿಗೆ ಸಿಗುವ ಮಳಿಗೆಗಳಿವೆಯೇ? ಅವರ ಶಿಕ್ಷಣವೂ ಐದು ರೂಪಾಯಿಯಲ್ಲಿ ಮುಗಿಯಿತೇ? ಅವರ ಮಕ್ಕಳಿಗೆ ಶಿಕ್ಷಣ ಕೊಡುವ ಸಂಸ್ಥೆಗಳು ಐದು ರೂಪಾಯಿ ಫೀಸು ಇಡುವುದೇ? ಇಂತಹ ವಿಶೇಷ ಸವಲತ್ತುಗಳು ವೈದ್ಯರಿಗಿಲ್ಲ ಎಂದ ಮೇಲೆ, ಅವರು ತಮ್ಮ ಸೇವೆಗೆ ಇಂತಿಷ್ಟು ಶುಲ್ಕ ಎಂದು ತೆಗೆದುಕೊಂಡರೆ ತಪ್ಪೇನಿದೆ? ಸಾಫ್ಟ್‌ವೇರ್ ಎಂಜಿನಿಯರ್‌ಗೆ ಎರಡು ಲಕ್ಷ ಸಂಬಳವಂತೆ... ಎಂದು ಕಣ್ಣರಳಿಸಿ ಹೆಮ್ಮೆ ಪಡುವ ಅದೇ ಜನ, ವೈದ್ಯರಿಂದ ಐದು ರೂಪಾಯಿ ಸೇವೆ ನಿರೀಕ್ಷಿಸುವುದು ಎಷ್ಟು ಸರಿ? ವಕೀಲ, ವ್ಯಾಪಾರಿ, ಉದ್ಯಮಿಗಳು ಲಕ್ಷಗಟ್ಟಲೆ ಸಂಪಾದಿಸಿ, ಆಸ್ತಿ ಮಾಡಿದರೆ ಭೇಷ್ ಅನ್ನುವವರಿಗೆ ವೈದ್ಯರನ್ನು ಕಂಡರೆ ಕಣ್ಣು ಕೆಂಪಾಗುವುದು ಏಕೆ?

ಡಾಕ್ಟರ್ ಫೀಸು ದುಬಾರಿ ಎನ್ನುವವರು ಅದನ್ನು ಬೇರೆ ಸೇವೆಗಳಿಗೆ ಹೋಲಿಸಿ ನೋಡಲಿ. ಕೇಶವಿನ್ಯಾಸಕ್ಕೆ ಆರು ನೂರು, ಪ್ಲಂಬರ್, ಎಲೆಕ್ಟ್ರಿಷಿಯನ್‌ಗೆ ನಾಲ್ಕು ನೂರು, ಜ್ಯೋತಿಷಿ ಪಂಡಿತರಿಗೆ ನೂರರ ನೋಟುಗಳದೇ